ಸಂ.LND(1)221/2009-10

ಜಿಲ್ಲಾಧಿಕಾರಿಯವರ ಕಾರ್ಯಾಲಯ,
ಹಾಸನ ಜಿಲ್ಲೆ, ಹಾಸನ,
ದಿನಾಂಕ: 26/10/2010.

## ಅಧಿಕೃತ ಜ್ಞಾಪನ

ವಿಷಯ: ಸರ್ಕಾರಿ ಜಮೀನನ್ನು ಸಂರಕ್ಷಿಸಲು ರಾಜ್ಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪ್ರಾಧಿಕಾರಗಳನ್ನು ರಚಿಸುವ ಬಗ್ಗೆ.

********

P

ಸರ್ಕಾರದ ಆದೇಶ ಸಂಖ್ಯೆ ಕಂ.ಇ.82 ಎಲ್.ಜಿ.ಕ್ಯೂ 99(ಪಿ1) ಬೆಂಗಳೂರು ದಿನಾಂಕ 13/11/2008 ರಂತೆ ಸರ್ಕಾರಿ ಭೂಮಿಗಳನ್ನು ಸಂರಕ್ಷಿಸಲು ರಾಜ್ಯ, ಜಿಲ್ಲಾ, ಮತ್ತು ತಾಲ್ಲೂಕು ಮಟ್ಟದ ಪ್ರಾಧಿಕಾರಗಳನ್ನು ರಚಿಸಿ ಆದೇಶ ಹೊರಡಿಸಲಾಗಿದೆ. ಆ ಪ್ರಕಾರ ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಇಲಾಖಾವಾರು ನೇಮಕಗೊಂಡ ಸಮಿತಿ ಸದಸ್ಯರ/ ಅಧಿಕಾರಿಗಳನ್ನು ನಮೂದಿಸಿ ಈ ಕೆಳಕಂಡಂತೆ ಸಮಿತಿ ರಚಿಸಲಾಗಿದೆ.

1) ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ-ಅಧ್ಯಕ್ಷರು.
2) ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಹಾಸನ ಜಿಲ್ಲೆ-ಸದಸ್ಯರು.
3) ಉಪ ವಿಭಾಗಾಧಿಕಾರಿಗಳು, ಹಾಸನ-ಸದಸ್ಯ ಕಾರ್ಯದರ್ಶಿ.
4) ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂ ದಾಖಲೆಗಳ ಉಪನಿರ್ದೇಶಕರು, ಹಾಸನ ಜಿಲ್ಲೆ-ಸದಸ್ಯರು.
5) ತಹಶೀಲ್ದಾರರು ಹಾಸನ,ಅರಸೀಕೆರೆ,ಹೊಳೆನರಸೀಪುರ,ಚನ್ನರಾಯಪಟ್ಟಣ,ಸಕಲೇಶಪುರ,ಆಲೂರು, ಬೇಲೂರು, ಅರಕಲಗೂಡು- ಸದಸ್ಯರು.
6) ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವಿಭಾಗ, ಹಾಸನ- ಸದಸ್ಯರು.
7) ಕಾರ್ಯ ನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನ- ಸದಸ್ಯರು.
8) ಕಾರ್ಯ ನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ-ಸದಸ್ಯರು.
9) ಜಿಲ್ಲಾ ಆರೋಗ್ಯಾಧಿಕಾರಿ, ಹಾಸನ ಜಿಲ್ಲೆ- ಸದಸ್ಯರು.
10) ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ- ಸದಸ್ಯರು.
11) ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಹಾಸನ- ಸದಸ್ಯರು.
12) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಹಾಸನ-ಸದಸ್ಯರು.
13) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆ, ಹಾಸನ-ಸದಸ್ಯರು.
14) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಹಾಸನ- ಸದಸ್ಯರು.
15) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ- ಸದಸ್ಯರು.

ಪ್ರಾದೇಶಿಕ ಆಯುಕ್ತರ ಕಾರ್ಯಾಲಯ
ಮೈಸೂರು ವಿಭಾಗ, ಮೈಸೂರು
27 OCT 2010
OFFICE OF THE REGIONAL COMMISSIONER
MYSORE DIVISION, MYSORE
LND.SI

27/10/10

AC Sakleshpur

27/10/10

ಈ ಪ್ರಾಧಿಕಾರವು ಈ ಕೆಳಕಂಡ ಅಂಶಗಳ ಬಗ್ಗೆ ಕಾರ್ಯನಿರ್ವಹಿಸತಕ್ಕದ್ದು.

1) ಸರ್ಕಾರಿ ಭೂಮಿಯ ಒತ್ತುವರಿ ಪತ್ತೆ ಹಚ್ಚುವುದು ಮತ್ತು ತೆರವುಗೊಳಿಸುವುದು.
2) ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 192(ಎ) ರಡಿಯಲ್ಲಿ ಅಪರಾಧ ಪ್ರಕರಣಗಳನ್ನು ದಾಖಲು ಮಾಡುವುದು.
3) ಸದಸ್ಯ ಕಾರ್ಯದರ್ಶಿಗಳಾಗಿರುವ ಉಪವಿಭಾಗಾಧಿಕಾರಿಗಳು, ಹಾಸನ ಉಪ ವಿಭಾಗ ರವರು ಪ್ರತಿ ಮಾಹೆ ಮೇಲ್ಕಂಡ ಪ್ರಾಧಿಕಾರದ ಸಭೆ ಕರೆದು ಒತ್ತುವರಿ ಗುರುತಿಸಿ ತೆರವುಗೊಳಿಸಿದ ಜಮೀನುಗಳ ಬಗ್ಗೆ ನಿಗದಿತ ನಮೂನೆಯಲ್ಲಿ ಪ್ರಗತಿ ತ:ಖ್ತೆ ಹಾಗೂ ಸಭಾ ನಡವಳಿಯನ್ನು ಸಲ್ಲಿಸುವುದು.

ಜಿಲ್ಲಾಧಿಕಾರಿ,
ಹಾಸನ ಜಿಲ್ಲೆ, ಹಾಸನ.

ಪ್ರತಿ:

1) ಅಧ್ಯಕ್ಷರು, ಸರ್ಕಾರಿ ಜಮೀನು ಸಂರಕ್ಷಣ ಕಾರ್ಯಪಡೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ರವರಿಗೆ.
3) ಸಂಬಂಧಪಟ್ಟ ಅಧಿಕಾರಿಗಳಿಗೆ.
4) ಕಛೇರಿ ಕಡತಕ್ಕೆ.

LND.sl